**PW_12**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಚಿತ್ರದುರ್ಗ**

**ಸಿ.ಸಿ.2350/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸೈಯದ್ ಇಸಾಕ್ | PW:12 |
| ತಂದೆಯ ಹೆಸರು | - | ಲೇಟ್ ಸೈಯದ್ ಹಸನ್ | CW:37 |
| ವಯಸ್ಸು | - | 67 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - | ನಿವೃತ್ತ ಪೊಲೀಸ್ ಉಪಾದಿಕ್ಷಕರು ಡಿ ಸಿ ಆರ್ ಬಿ | ದಿ: 23/07/2026 |
| ವಾಸ | - | ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. 30.05.2013 ರಿಂದ ಸುಮಾರು 3 ತಿಂಗಳ ಕಾಲ ಡಿ ಸಿ ಆರ್ ಬಿ ಚಿತ್ರದುರ್ಗ ಪೊಲೀಸ್ ಉಪಾದೀಕ್ಷಕರಾಗಿ ಕಾರ್ಯ ನಿರ್ವಹಿಸುತಿದ್ದೆ . ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ30.05.2013 ರಂದು ನನ್ನ ಪ್ರಬಾರ ಅದಿಕಾರಿಯಿಂದ ಕಡತವನ್ನು ಪಡೆದು ಪರಿಶೀಲನೆ ಮಾಡಿ ತನಿಖೆ ಮುಂದುವರೆಸಿದ್ದೆ. 12.06.2013 ರಂದು ಎಪ್ ಎಸ್ ಎಲ್ ವರದಿ ಬೆಂಗಳೂರು ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೆ ಸದರಿ ವರದಿಯನ್ನು ಸಾಕ್ಷಿ ಗುರುತಿಸಿದ್ದು ನಿಪಿ.127 ಎಂದು ಗುರುತಿಸಲಾಯಿತು. ಸಮಾರು 50 ಪುಟಗಳಿಂದ ಕೂಡಿದೆ. 25.06.2013 ರಂದು ಸುಳ್ಳು ಗುರುತಿನ ದಾಖಲೆ ಸೃಷ್ಟಿಸಿರುವ ಬಗ್ಗೆ ವಿವರಣೆ ಕೋರಿ ತಹಶೀಲ್ದಾರ್ ಚಿತ್ರದುರ್ಗ ರವರಿಗೆ ಮನವಿ ಸಲ್ಲಿಸಿದ್ದೆ ಮತ್ತು ಮರು ಜ್ಞಾಪನ ಸಹ ನೀಡಿದ್ದೆ. ವರ್ಗಾವಣೇ ಆದ ಕಾರಣ ಕಡತವನ್ನು ಚಾಸಾ.38 ರವರಿಗೆ ಹಸ್ತಾಂತರಿಸಿದೆ.

**ಪಾಟೀ ಸವಾಲು 1 ನೇ ಆರೋಪಿಯ ಪರ ಶ್ರೀ ಎ ಜಿ ಎಸ್ ವಕೀಲರಿಂದ:**

2. 25.06.2013 ರಂದು ತಹಶೀಲ್ದರ್ ರವರಿಗೆ ಗುರುತಿನ ದಾಖಲೆ ಸೃಷ್ಟಿಸಿದ ಬಗ್ಗೆ ವಿವರಣೆ ಕೋರಿ ತನಿಖಾದಿಕಾರಿಯಾದ ನಾನೇ ಪತ್ರ ನೀಡಿದ್ದೆ. ಬ್ಯಾಂಕ್ ನವರು ಗುರುತಿನ ದಾಖಲೆ ಸೃಷ್ಟಿಸಿದ ಬಗ್ಗೆ ಮಾಹಿತಿ ನೀಡಿದ್ದರು. ಗುರುತಿನ ದಾಖಲೆ ಸೃಷ್ಟಿಸಿದೆ ಎಂಬ ಬಗ್ಗೆ ಬ್ಯಾಂಕ್ ನಿಂದ ದಾಖಲೆ ನೀಡಿದ್ದರು. ಸದರಿ ದಾಖಲೆಗಳನ್ನು ಕಡತದಲ್ಲಿ ಅಳವಡಿಸಿಕೊಂಡಿದ್ದೆ. ನಾನು ಕಡತವನ್ನು ಪಡೆದುಕೊಳ್ಳುವ ಪೂರ್ವದಲ್ಲಿ ನನ್ನ ಪೂರ್ವ ತನಿಖಾದಿಕಾರಿಗೆ ಆ ಬಗ್ಗೆ ಬ್ಯಾಂಕ್ ನವರು ದಾಖಲೆ ನೀಡಿದ್ದರು.

1 ನೇ ಆರೋಪಿ ಪರ ಮಾಡಿದ ಪಾಟೀಸವಾಲನ್ನೆ 2 ಮತ್ತು 4 ನೇ ಆರೋಪಿ ಪರ ಪಾಟೀಸವಾಲು ಎಂದು ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿಕೊಳ್ಳಲಾಗಿದೆ.

**ಪಾಟೀ ಸವಾಲು 5 ನೇ ಆರೋಪಿಯ ಪರ ಶ್ರೀ ಡಿ ಕೆ ಎಸ್ ವಕೀಲರಿಂದ:**

3. ಯಾವ ಯಾವ ವ್ಯಕ್ತಿಗಳ ಗುರುತಿನ ದಾಖಲೆ ಗಳು ಸೃಷ್ಟಿಯಾಗಿದೆ ಎಂಬ ಬಗ್ಗೆ ಸದರಿ ವ್ಯಕ್ತಿಗಳ ಹೆಸರುಗಳ ಪಟ್ಟಿ ಇದೆ ಆದರೆ ನನಗೆ ಈಗ ಹೇಳಲು ಆಗುವುದಿಲ್ಲ ಸದರಿ ಪಟ್ಟಿಯನ್ನೆ ತಹಶೀಲ್ದಾರ್ ರವರಿಗೆ ನೀಡಿದ್ದೆ.

**ಪಾಟೀ ಸವಾಲು 3 ಮತ್ತು 7 ನೇ ಆರೋಪಿಗಳ ಪರ ಶ್ರೀ ಡಿ ಕೆ ಎಸ್ ವಕೀಲರಿಂದ:**

4. ಎಫ್ ಎಸ್ ಎಲ್ ವರದಿ ಸೀಲ್ಡ ಕವರ್ ನಲ್ಲಿ ಬಂದಿತ್ತ ಅಥವಾ ತೆರೆದ ರೀತಿಯಲ್ಲಿ ನೀಡಿದ್ದರಾ ಎಂದರೆ ಸಾಕ್ಷಿ ಸೀಲ್ಡ ಕವರ್ ನಲ್ಲಿ ಬಂದಿರುತ್ತೆ ಎಂದು ನುಡಿಯತ್ತಾರೆ. ಸಾಕ್ಷಿ ಮುಂದುವರೆದ ಸೀಲ್ಡ ಕವರ್ ನಲ್ಲಿ ಬಂದಿತ್ತು ಎಂದು ನುಡಿಯುತ್ತಾರೆ.

**1, 5 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನೆ 3 ಮತ್ತು 7**

**PW_12**

**ನೇ ಆರೋಪಿತರ ಪರ ಪಾಟೀಸವಾಲನ್ನಾಗಿ ಅಳವಡಿಸಿಕೊಳ್ಳಲು ಕೋರಿದ್ದು ಅಳವಡಿಸಿಕೊಳ್ಳಲಾಗಿದೆ.**

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**